ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರಸ್ತೆ ಟಾರ್ಕಲಿಟ್ಸ್ ಒಳಗಿದ್ದರೆ dustless ಮಾಡಬೇಕೆಂದು ಪ್ರೊಗ್ರಾಂ ಇದೆ.

Sri A. BHEEMAPPA NAIK.—Will the Government kindly take up the execution of that much at least this year?

The Hon'ble Sri T. MARIAPPA.—We will try our best.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—4ನೇ ತರಗತಿ ರಸ್ತೆಗಳಿಗೆ ಮೈಲಿಗೆ 100 ರೂಪಾಯಿ ಕೊಡಬೇಕೆಂದಿದ್ದೀರಿ. ಅದು ಸಾಕಾಗುತ್ತದೆಯೇ?

Mr. SPEAKER.—The Hon'ble Member may put questions having a bearing on this question; and avoid asking general questions.

ಶ್ರೀ ಬಿ. ಚೆನ್ನಬೈರೇಗೌಡರು.—ನಾಲ್ಕನೇ ಕ್ಲಾಸ್ ರಸ್ತೆ ಎಂದರೆ ಎಂಥಾರಸ್ತೆ? ಮಣ್ಣಿನ ರಸ್ತೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—4ನೇ ಕ್ಲಾಸ್ ರಸ್ತೆಯನ್ನು ಐ. ಎ. ಸಿ. ರಸ್ತೆ ಅಂತ ಕರೆಯಬಹುದು.

ಶ್ರೀ ಬಿ. ಚೆನ್ನಬೈರೇಗೌಡರು.—ಮುನಿಸಿಪಾಲಟಿ ಸರಹದ್ದಿನ ಬನ್ನುಗಳು ಹೋಗತಕ್ಕ ಭಾಟಾ ಮಾರ್ಗಗಳನ್ನು ಟಾರು ಮಾಡುವುದು ಯಾರಿಗೆ ಸೇರಿದ್ದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸ್ಟೇಟ್ ಫಂಡ್ ರಸ್ತೆಯಾಗಿ ಮುನಿಸಿಪಲ್ ಸರಹದ್ದಿನಲ್ಲಿದ್ದರೆ ಅದರ ಜವಾಬ್ದಾರಿ ನಮ್ಮದು.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು (ಹಾಸನ ಜಿಲ್ಲೆ).—ಕಳೆದ ಮೂರು ವರ್ಷಗಳಿಂದಲೂ ಸಂಚಾರವು ವಿಪರೀತವಾಗಿ ಹೆಚ್ಚಿರುವುದರಿಂದ ಆ ರಸ್ತೆಯು ಏಕ ಪ್ರಕಾರವಾಗಿ ನಾದುರಸ್ತಾಗುತ್ತಿದೆ ಎಂದು ಹೇಳಿದ್ದೀರಿ. ಈ ಮೂರು ವರ್ಷದಿಂದ ಹೆಚ್ಚು ಟ್ರಾಫಿಕ್ ಇದೆ ಎಂದ ಮೇರೆ ರೋಡ್ ಸೆಸ್ ಕೂಡ ಜಾಸ್ತಿ ಭರುತ್ತಿದೆಯಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ. ರೋಡ್ ಸೆಸ್ ಬಂದೇ ಬರಬೇಕು.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ಜಾಸ್ತಿ ಉತ್ಪತ್ತಿ ಆಗುತ್ತಿರುವ ಕಡೆ ಈ ಮೂರು ವರ್ಷದಿಂದ ಕೆಲಸ ಮಾಡದೇ ಇರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Availability of funds ಮೇರೆ ಹೋಗುತ್ತದೆಯೆಂದು ಆಗಲೇ ಉತ್ತರ ಕೊಟ್ಟೆ. ಬಜೆಟ್‌ನಲ್ಲಿ ಒದಗಿಸಬೇಕಾದರೇ ಸಾಧ್ಯವಾದಷ್ಟು ಜಾಸ್ತಿಯಾಗಿ ಒದಗಿಸಿದ್ದೇವೆ.

ಶ್ರೀ ಎಸ್. ಸಿ. ಸೂರ್ಯನಾರಾಯಣ ಶೆಟ್ಟರು.—ಈ ವರ್ಷವಾದರೂ ಆ ಕೆಲಸವನ್ನು ಮಾಡಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಂಡಿತವಾಗಿಯೂ to the extent possible. I will try to see that these roads are improved.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳನ್ನು ನೋಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಡಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ರಿಪೇರಿ ಬಗ್ಗೆ ಖಾಯಂ ವ್ಯವಸ್ಥೆ ಮಾಡಿರುವುದು ಗೊತ್ತೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲೂ ಸಹ ಖಾಯಂ ಆದ ವ್ಯವಸ್ಥೆ ಇದೆ. ಹಣ ಸಾಲದು ಅಷ್ಟೆ.

Mr. SPEAKER.—Question No. 99. Sri K. Puttaswamy. The Hon'ble Member is not present. Question No. 99 will be treated as an unstarred question.

Sri M. C. VENKATESHAN (Mandya District—Depressed Class).—This is an important question. I request the Chair to kindly allow me to put it on his behalf.

Mr. SPEAKER.—Sri K. Puttaswamy is not present and he has not made any such request to the Chair in writing. So I cannot allow the Hon'ble Member to put the question on his behalf.

Mr. SPEAKER.—Question No. 149. Sri V. S. Narayana Rao. The Hon'ble Member is not present. This question also will be treated as unstarred.

Next Question No. 186. Sri S. Rangaramiah.

Pay and Prospects of Sub-Overseers in the Public Works Department.

*ಪ್ರಶ್ನೆ 186.—ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕೆಲಸಕ್ಕೆ ನೇಮಕವಾಗಿರತಕ್ಕ ಸಬ್-ಓವರ್‌ಸಿಯರುಗಳ ಸಂಖ್ಯೆಯೆಷ್ಟು; ಅವರ ಪೈಕಿ ಎಷ್ಟು ಮಂದಿ ಖಾಯಂ ಆಗಿದ್ದಾರೆ; ಎಷ್ಟು ಮಂದಿ ಹಂಗಾಮಿಯಾಗಿದ್ದಾರೆ;

(b) ಖಾಯಂ ಆದ ಮತ್ತು ಹಂಗಾಮಿಯಾಗಿರುವ ಸಬ್-ಓವರ್‌ಸಿಯರುಗಳ ಸಂಬಳಗಳು ಮತ್ತು ಗ್ರೇಡುಗಳೇನು;

(c) ತಮ್ಮ ಸಂಬಳಗಳನ್ನು ಮತ್ತು ಗ್ರೇಡುಗಳನ್ನೂ ಪುನರ್ವಿಮರ್ಶಿಸಿ ಹೆಚ್ಚಿಸಿ ಕೊಡಬೇಕೆಂಬುದಾಗಿ ಸಬ್-ಓವರ್‌ಸಿಯರುಗಳಿಂದ ಮನವಿಗಳೇನಾದರೂ ಬಂದಿವೆಯೇ;

(d) ಸಬ್-ಓವರ್‌ಸಿಯರುಗಳಲ್ಲಿ ಸೇಕಡಾ 25ರಷ್ಟು ಮಂದಿಯನ್ನು ಓವರ್‌ಸಿಯರುಗಳ ದರ್ಜೆಗೆ ಬಡ್ತಿ ಮಾಡಬೇಕೆಂಬುದಾಗಿ ಸರ್ಕಾರದವರ ಹುಕುಮು ಹೊರಟಿದ್ದಿತೆ; ಅಂಥ ಹುಕುಮು ಆಗಿದ್ದಲ್ಲಿ, ಅದನ್ನು ಕಾರ್ಯರೂಪಕ್ಕೆ ತರಲಾಗಿದೆಯೇ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಒಟ್ಟು 669 ಮಂದಿ.

ಖಾಯಂ ಆಗಿರುವವರು	...	407 ಮಂದಿ
ಹಂಗಾಮಿಯಾಗಿರುವವರು	...	262 ಮಂದಿ
ಒಟ್ಟು	...	669 ಮಂದಿ

(b) 1947ನೆಯ ಇಸವಿ ಸೆಪ್ಟೆಂಬರ್ 21ನೆಯ ತಾರೀಖಿನ ಎಫ್. ಎಲ್. 2010—70—ಎಸ್. ಮತ್ತು ಎ. ನಂಬರಿನ ಸರ್ಕಾರಿ ಹುಕುಮಿನ ಮೇರೆಗೆ ಸಬ್-ಓವರ್‌ಸಿಯರುಗಳ ಸಂಬಳದ ಗ್ರೇಡುಗಳು ಯಾವುವೆಂದರೆ; ಡಿಪ್ಲೊಮಾ ಪ್ರಶಸ್ತಿಗಳನ್ನು ಪಡೆದಿರುವವರ ಗ್ರೇಡು ರೂ 60-5-100 ಮತ್ತು ಸರ್ಟಿಫಿಕೇಟುಗಳನ್ನು ಪಡೆದಿರುವವರ ಗ್ರೇಡು ರೂ. 50-5-100.

(c) ಬಂದಿವೆ.

(d) ಸರ್ಕಾರದ ನಾನಾ ಇಲಾಖೆಗಳ ನೌಕರರುಗಳ ಸಂಬಳಗಳ ಪುನರ್ವಿಮರ್ಶೆಗೆ ಸಂಬಂಧಿಸಿದ 1947ನೆಯ ಇಸವಿ ಸೆಪ್ಟೆಂಬರ್ 21ನೆಯ ತಾರೀಖಿನ ಎಫ್. ಎಲ್. 2010-70 ಎಸ್. ಮತ್ತು ಎ. ನಂಬರಿನ ಹುಕುಮಿನಲ್ಲಿ ಸಬ್-ಓವರ್‌ಸಿಯರುಗಳ ಸಂಖ್ಯೆಯಲ್ಲಿ ಸೇಕಡಾ 25ರಷ್ಟು ಮಂದಿ ಓವರ್‌ಸಿಯರುಗಳಿರಬೇಕೆಂದು ತಿಳಿಸಲಾಗಿದ್ದಿತು. ಅದರಂತೆ, ಆ ಇಲಾಖೆಯ "ಅಲೋಕೇಷ್ಷ ಪಟ್ಟಿ" ಯನ್ನು ಮಂಜೂರ್ಮಾಡಿಸಾದರಾದ 1949ನೆಯ ಇಸವಿ ಜೂಲೈ 23ನೆಯ ತಾರೀಖಿನ ಪಿ. ಡಬ್ಲ್ಯು. 10389-91—ಎಷ್ಟಾಬ್ಲಿಷ್ಮೆಂಟ್ 39-48-87ನೆಯ ನಂಬರಿನ ಹುಕುಮಿನಲ್ಲಿ, ಓವರ್‌ಸಿಯರುಗಳ ಸಂಖ್ಯೆ 54 ಎಂಬುದಾಗಿಯೂ, ಸಬ್-ಓವರ್‌ಸಿಯರುಗಳ ಸಂಖ್ಯೆ 218 ಎಂಬುದಾಗಿಯೂ ನಿಗದಿ ಮಾಡಲಾಯಿತು.

ಮೇಲೆ ಕಂಡ ಇಲಾಖೆಯನ್ನು ಪುನರ್ವ್ಯವಸ್ಥೆಗೆ ಮಂಜೂರಾತಿ ಕೊಟ್ಟು ಸಾದರಾದ 1949ನೆಯ ಇಸವಿ ಸೆಪ್ಟೆಂಬರ್ 27ನೆಯ ತಾರೀಖಿನ 2798 ಸಿ. ಬಿ. 93-49ನೆಯ ನಂಬರಿನ ಸರ್ಕಾರಿ ಹುಕುಮಿನಿಂದ ಓವರ್‌ಸಿಯರುಗಳ ಸಂಖ್ಯೆಯನ್ನು 407 ಎಂಬುದಾಗಿಯೂ ನಿಗದಿ ಮಾಡಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಸಬ್-ಓವರ್‌ಸೀಯರುಗಳು ಸಂಬಳ ಹೆಚ್ಚು ಮಾಡಿಕೊಡಬೇಕೆಂದು ಅವರ ಬೇಡಿಕೆಯನ್ನು ಯಾವಾಗ ಅವರು ಸಲ್ಲಿಸಿದರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಒಂದು ವರ್ಷದ ಕೆಳಗೆ ಅಂತ ಕಾಣುತ್ತದೆ, ಖಚಿತವಾದ ತಾರೀಖು ಈಗ ನೆನಪಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.— ಅವರು ಯಾವ ರೀತಿ ಗ್ರೇಡ್ ಕೊಡಬೇಕೆಂದು ಕೇಳಿಕೊಂಡಿದ್ದರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—150 ರೂಪಾಯಿ ಲಿಮಿಟ್ ಜಾಸ್ತಿ ಮಾಡಿ ಎಂದು ಕೇಳಿದ್ದರು.

ಶ್ರೀ ಎಸ್. ರಂಗರಾಮಯ್ಯನವರು.—(ಬ) ಪ್ರಶ್ನೆಗೆ ಉತ್ತರವಾಗಿ ರೂ. 60-5-100 ಡಿಪ್ಲೊಮಾ ಹೋಲ್ಡರುಗಳಿಗೂ, ರೂ. 50-5-100 ಸರ್ಟಿಫಿಕೇಟ್ ಹೋಲ್ಡರುಗಳಿಗೂ ಗ್ರೇಡು ಇದೆ ಎಂದು ಹೇಳಿದ್ದೀರಿ. ಈಗ ಆ ಗ್ರೇಡುಗಳಲ್ಲಿ 100 ರೂಪಾಯಿ ತಲುಪಿರತಕ್ಕವರು ಎಷ್ಟು ಜನ ಇದ್ದಾರೆ?

The Hon'ble Sri T. MARIAPPA.—I want notice because I have to collect the information from different Sub-Divisions.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕ ಜನರು ನೂರು ರೂಪಾಯಿ ಸಂಬಳ ಪಡೆದು ಮುಂದೆ ಇಕ್ರಿಮೆಂಟ್ ಇಲ್ಲದೆ Stagnate ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂಥವರು ಹೆಚ್ಚು ಜನರಿಲ್ಲ. 1-1-1947ರಲ್ಲಿ ವೇತೇಜ್ ಬಂದು ಕೆಲವರು ಮಾತ್ರ 100 ರೂಪಾಯಿ ಮುಟ್ಟಿರಬಹುದು.

ಶ್ರೀ ಎಸ್. ರಂಗರಾಮಯ್ಯನವರು.—1947ನೆಯ ಇಸವಿಯ ಆಜ್ಞೆಯ ಪ್ರಕಾರ ಸಬ್-ಓವರ್‌ಸಿಯರ ಸಂಖ್ಯೆಯ ಸೇಕಡ 25ರಷ್ಟು ಜನರನ್ನು ಓವರ್‌ಸಿಯರುಗಳಾಗಿ ತೆಗೆದುಕೊಳ್ಳಬೇಕು. ಇದೆನ್ನು ಬದಲಾಯಿಸಿಲ್ಲ ತಾನೆ? ಆ ಆಜ್ಞೆ ಜಾರಿಯಲ್ಲಿದೆ ತಾನೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಉತ್ತರದಲ್ಲೇ ಇದೆ. The number has been fixed at 66 and 407. You will find it in the latest Government Order dated 27th September 1949.

Sri S. RANGARAMIAH.—In answer to clause (d) it is stated that in the G. O. No. Fl. 2010–70—S. & A. dated 21–9–47, relating to the revision of pay in the several departments of Government it was stated that the number of Overseers may be 25 per cent of the number of Sub-overseers and it was accordingly fixed at 54 and 218 in the G. O. No. P. W. 10389–91—Est. 39–48–87 dated 23–6–49 sanctioning the allocation statement, ಎಂದಿದೆಯಲ್ಲಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ 'May be' ಎಂದಿದೆ. ಆದರೆ ನಾವು scope of activities ನೋಡಿಕೊಂಡು ಓವರ್‌ಸಿಯರುಗಳು 66 ಮಂದಿ ಸಬ್ ಓವರ್‌ಸಿಯರುಗಳು 407 ಮಂದಿ ಇರಬೇಕೆಂದು ನಿಗದಿ ಮಾಡಿದ್ದೇವೆ,

ಶ್ರೀ ಎಸ್. ರಂಗರಾಮಯ್ಯನವರು.—66ಕ್ಕಿಂತಲೂ ಹೆಚ್ಚು ಜನರನ್ನು ಓವರ್‌ಸಿಯರುಗಳಾಗಿ ತೆಗೆದುಕೊಳ್ಳುವ ವಿಷಯ ಸರ್ಕಾರದ ಗಮನದಲ್ಲಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಿರತಕ್ಕ ಕೆಲಸವನ್ನು ನೋಡಿದರೆ, 66 ಜನರು ಸಾಕೆಂದು ಕಾಣುತ್ತದೆ. ರೀ-ಆರ್ಗನೈಜೇಷ್ಷನಲ್ಲಿ ಕೆಲವು ಪೋಸ್ಟ್‌ಗಳನ್ನು ಕಡಿಮೆಮಾಡಬೇಕಾಗಿ ಬಂತು.

ಶ್ರೀ ಎಸ್. ರಂಗರಾಮಯ್ಯನವರು.—ಈಗಾಗಲೇ ನೂರು ರೂಪಾಯಿ ಸಂಬಳವನ್ನು ತೆಗೆದುಕೊಳ್ಳುತ್ತಾ ಇರುವವರಿಗೆ ಮುಂದೆ ಬಡ್ತಿಯೇ ಇಲ್ಲದೆ ಇರುವಂತಾಗಿ ಅನ್ಯಾಯವಾಗುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ರೀ ಆರ್ಗನೈಜೇಷ್ಷ ಯೋಜನೆಯ ಪ್ರಕಾರ ಎಷ್ಟು ಜನ ಸಬ್ ಓವರ್‌ಸಿಯರುಗಳಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೇಳುತ್ತೇನೆ. ಒಟ್ಟು ಸಬ್ ಓವರ್‌ಸಿಯರುಗಳು 608. According to the reorganisation scheme, the permanent strength is 407 and the tempo-

rary strength is 201. Out of 668 people 60 people have been retrenched.

ಶ್ರೀ ಎಸ್. ರಂಗರಾಮಯ್ಯನವರು.—ಮದ್ರಾಸ್ ಸರ್ಕಾರದಲ್ಲಿ ಸಬ್-ಓವರ್‌ಸೀಯರುಗಳಿಗೆ ಕೊಡುವ ಸಂಬಳವೆಷ್ಟೆಂಬುದು ಗೊತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖ್ಯ ಕೆಲಸಗಳನ್ನು ಮಾಡುವುದರಿಂದ ಅವರ ಮೇಲೆ ಹೆಚ್ಚಿನ ಜವಾಬ್ದಾರಿ ಬೀಳುತ್ತದೆಂಬುದು ಗೊತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೆಲ್ಲವನ್ನು ನೋಡಿಕೊಂಡೇ ಸಂಬಳದ ಗ್ರೇಡುಗಳನ್ನು ಗೊತ್ತು ಮಾಡಿರುವುದು.

ಶ್ರೀ ಎಸ್. ರಂಗರಾಮಯ್ಯನವರು.—ಅವರ ಸಂಬಳದ ಗ್ರೇಡುಗಳನ್ನು ಹೆಚ್ಚಿಸುವ ವಿಚಾರದಲ್ಲಿ ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರಿಂದ ಮನವಿಗಳು ಬಂದಿದ್ದವು, ಆದರೆ the question was deferred on account of financial stringency.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕ ಮಗಳೂರು ಜಿಲ್ಲೆ—ನಿಮ್ನ ಪಂಗಡ).—ಈ 608 ಜನರಲ್ಲಿ ನಿಮ್ನಪಂಗಡದವರು ಯಾರಾದರೂ ಇದ್ದಾರೆಯೆ;

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇರಬಹುದು, ಹರಿಜನರು, ಬೋಯಿ ಜನಾಂಗದವರೂ ಇರಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನೇಕಡ 25ರಷ್ಟು ಓವರ್‌ಸಿಯರುಗಳ ಸ್ಥಾನಗಳನ್ನು ಭರ್ತಿ ಮಾಡುವುದರಲ್ಲಿ ನಿಮ್ನವರ್ಗದವರಿಗೆ preference ಕೊಟ್ಟಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸೀನಿಯಾರಿಟಿ ಮತ್ತು ಎಫಿಷಿಯೆನ್ಸಿ ನೋಡಿಕೊಂಡು ಬಡ್ತಿ ಕೊಡುವುದು. ಆದರೆ ಕೆಲವು ಸಂದರ್ಭಗಳಲ್ಲಿ ಚೆನ್ನೂರ್‌ಮೇಲೆ ನೇಮಕ ಮಾಡಬಹುದೇ ಹೊರತು ಖಾಯಮಾಗಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಯಾರಿಗಾದರೂ ಸಬ್ ಓವರ್‌ಸಿಯರ್ ಆಗಿ ನೇಮಕವಾಗಿ ಎರಡು ವರ್ಷಗಳ ಮೇಲೆ ಓವರ್‌ಸಿಯರ್ ಕೆಲಸಕ್ಕೆ ನೇಮಕ ಮಾಡುತ್ತೇವೆಂದು ಮಾತು ಕೊಟ್ಟಿದ್ದೀರಾ?

The Hon'ble Sri T. MARIAPPA.—I am afraid that that question does not arise out of this. It is purely a personal question. It is better that personal questions are not ventilated on the floor of the House.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅದನ್ನು ಪರಿಶೀಲನೆ ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಅರಾಯದ ಹೇಳಿ, ನೋಡುತ್ತೇನೆ. ಈ ಸಂದರ್ಭದಲ್ಲಿ ಕೇಳಬಾರದು.

Sri M. MADIAH (Mysore District—Depressed Class).—Will the Government state how many members of the scheduled castes are Sub-overseers?

The Hon'ble Sri T. MARIAPPA.—I want notice.

Mr. SPEAKER.—Question time is over.

UNSTARRED QUESTIONS.

(To which answers were laid on the table.)

Restoration of Malvalli Tank.

*Q.—99. **Sri K. PUTTASWAMY** (Mandya District—General).—

Will the Government be pleased to state:—

(*a*) when the tank of Malavalli was breached and the reason for doing so;

(*b*) whether this tank was not the source of supply of drinking water;

(*c*) whether the people of Malavalli Town have not represented for the restoration of the tank;

(*d*) whether there is any difficulty in restoring the same?

A.—**The Hon'ble Sri T. MARIAPPA** (Home Minister).—

(*a*) In 1948, as an anti-malaria measure.

(*b*) No.

(*c*) No.

(*d*) Yes. This will be against the scheme of anti-malaria measures so far adopted in the interests of the health of the locality.

The question is being re-examined.

Amrit Mahal Kaval lands in Tarikere Taluk.

*Q.—145. **Sri W. H. HANUMANTHAPPA** (Bangalore District—General).—

Will the Government be pleased to state:—

(*a*) whether any Amrit Mahal Kaval lands were released in Tarikere Taluk in the years 1948 and 1949; and if so, the extent of the land so released for agricultural purposes;

(*b*) the names to whom the said lands were sold, the cost per acre and the extent of land granted to each person?